# ಗೋದೂಳಿ ಲಗ್ನ

'ಪತ್ರಕ್ಕಾಗಿ ಧನ್ಯವಾದಗಳು. ಬಹುಕಾಲದ ನಂತರ ಅಂತೂ ಅಂಚೆಯಲ್ಲಿ ಏನೋ ಬಂತು.
ಆದರೆ ನೀನ್ಯಾರೆಂದು ನನಗೆ ನೆನಪಾಗುತ್ತಿಲ್ಲ.
ಬಹುಶಃ ನಿನ್ನ ಈ ಪ್ರೇಮಾರ್ಪಣೆಯನ್ನು ಬಟವಾಡೆಯಾಗದ ಪತ್ರಗಳ ಖಾನೆಗೆ
ರವಾನಿಸಬೇಕಿತ್ತು ನೀನು.'

ಸುಮ್ಮನೇ ಹೇಳುವುದಾದರೆ, ನನಗೆ ಗೊತ್ತು
ನಾನು ಯಾವತ್ತೂ ಹುಟ್ಟಲೇ ಇಲ್ಲ.

ಅದೊಂದು ಹುಚ್ಚು ಸುಳಿ, ಶುದ್ಧ ಶಿವರಂಜಿನಿಯ ಪಾತಾಳಗರಡಿ
ಮೂರನೇ ಸ್ಥಾಯಿಯ ತಾಂಡವ ಗೀತ
ಮತ್ತು ನೀನು ಕುಸಿಯುತ್ತಾ ಕೃಶನಾಗಿ
ಕರಗುತ್ತಾ ನಾಶವಾಗಿ ಹೋದ ಬಗೆ
ಅಸಹನೀಯ ತಾರಕಸ್ಥಾಯಿ
ಸ್ವರಗಿವುಡು ಆತ್ಮಕ್ಕೆ ಅಪಸ್ವರದ ಗುರುತೂ ಹತ್ತದು

ಪ್ರೀತಿಯಿಲ್ಲದ ಅಕ್ಷರದ ಮುದ್ದೆಗಳ ಗಾಢ ನೆನಪುಗಳು
ರತಿಯುದ್ವೇಗದುಸಿರಿನ ಸದ್ದು ಅನಂಗನಾತುರದ ನೆಕ್ಕು
ಸತ್ಯದುಸಿರಿನ ಪ್ರತಿಮೆಗಳಂತೆ ರಿಂಗಣಿಸುತಿವೆ ಇಲ್ಲಿ
ಕಣ್ತಪ್ಪಿಸಿದ್ದು, ವಾದ ಹೂಡಿದ್ದು, ಕಾದಾಟ, ತಿರಸ್ಕಾರ ಮತ್ತು ಬಿಕ್ಕು....

ಗೋದೂಳಿ ಲಗ್ನದ ಈ ಪತ್ರದ ತುಂಬ ಜೇಡದಂತೆ ಹರಿದಾಡುತ್ತಿವೆ
ಕಾವ್ಯಕ್ಕೆ ಸಾಧ್ಯ ಎನ್ನುವ ಎಲ್ಲರಿಗೂ ನೆಲ ತಟ್ಟಿ ಇಟ್ಟ ಶಾಪ....

ಬಸವಳಿದ ನನ್ನ ನರಗಳಿಂದ ಎಲ್ಲ ನೆನಪುಗಳು ಸೋರಿ ಹೋಗಿವೆ ಈಗ
ಅಸಹಾಯ ಚಲನೆ ನರಳಿದೆ ನರಳಿ ಹೊರಳಿದೆ


## ನರೇಂದ್ರ ಪೈ

ಸದಾ ಉತ್ತಮ ಸಾಹಿತ್ಯದ ಕಡೆ ತುಡಿಯುವ ನರೇಂದ್ರ ಪೈ ಮಂಗಳೂರಿನವರು. ಅಲ್ಲಿನ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿರುವ ಪೈ ಮುಖ್ಯವಾಗಿ ವಿಮರ್ಶಕರು, ಕತೆಗಾರರು. ಅವರ ಕಥಾಸಂಗ್ರಹಗಳು– 'ಟಿಕ್ ಟಿಕ್ ಗೆಳೆಯ', 'ಕನಸುಗಳೇ ಮರಳಿ ಬನ್ನಿ'. ಅವರು ಕತೆಗಾರ ಎಸ್. ದಿವಾಕರ್ ಅವರ ಸಾಹಿತ್ಯವನ್ನು ಪರಿಚಯಮಾಡಿಕೊಡುವ ವಾಚಿಕೆ 'ರೂಪರೂಪಗಳನು ದಾಟಿ' ಸಂಪಾದಿಸಿದ್ದಾರೆ.